<u>**ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಕುಮಟಾ.**</u>

**ಸಿ ಸಿ ನಂ.135/2023**

ಮುರ್ಕುಂಡೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ. ಕುಮಟಾ

..... ಫಿರ್ಯಾದಿ

ವಿರುದ್ಧ

ವಿಘ್ನೇಶ್ವರ ಜಟ್ಟಯ್ಯ ಗುನಗ ...... ಆರೋಪಿ

ಆರೋಪಿಯ ಹೆಸರು – ವಿಘ್ನೇಶ್ವರ ಜಟ್ಟಯ್ಯ ಗುನಗ

ವಯಸ್ಸು – ವರ್ಷ

ವಾಸ್ತವ್ಯ – ಹಳಕಾರ , ಕುಮಟಾ

**ದಿನಾಂಕಃ 2.8.2023**

<u>**ಆರೋಪಣೆ**</u>

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ಪಡೆದ ಸಾಲದ ಹಣದ ಮರುಪಾವತಿಗಾಗಿ ಇಂಡಿಯನ್ ಓವರಸೀಸ್ ಬ್ಯಾಂಕ, ಕುಮಟಾ ಶಾಖೆಯ ಚೆಕ್ ನಂಃ 996364 ನೇದನ್ನು ದಿನಾಂಕಃ 4.11.2022 ರಂದು ರೂ.1,10,523/– ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಫಿರ್ಯಾದಿ ಸಂಸ್ಥೆಯವರು ಸದ್ರಿ ಚೆಕನ್ನು ನಗದೀಕರಣಕ್ಕಾಗಿ ತಮ್ಮ ಸಂಸ್ಥೆಯ ಖಾತೆ ಇರುವ ಬ್ಯಾಂಕಗೆ ಹಾಜರುಪಡಿಸಿದಾಗ ಬ್ಯಾಂಕಿನವರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲಾ (Funds Insufficient) ಅಂತಾ ಮೆಮೋ ನೀಡಿ ಚೆಕ್‌ನ್ನು ವಾಪಸ್ ಮಾಡಿರುತ್ತಾರೆ. ಈ ಕುರಿತು ಫಿರ್ಯಾದಿಯು ನಿಮಗೆ ತಮ್ಮ ವಕೀಲರ ಮೂಲಕ ತಾಃ 24.11.2022 ರಂದು ರಜಿಸ್ಟರ್ಡ ನೋಟಿಸು ಕೊಟ್ಟಿದ್ದು, ಸದ್ರಿ ನೋಟಿಸನ್ನು ನೀವು ಸ್ವೀಕರಿಸಿಯೂ, ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡದೇ ನೆಗೋಶಿಯಬಲ್ ಇನಸ್ಟ್ರುಮೆಂಟ್ ಕಾಯಿದೆ ಕಲಂ138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆಃ 1) ಈಗ ನಿಮಗೆ ಮೇಲೆ ಓದಿ ಹೇಳಿದ ಆರೋಪಣೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆಃ 2) ನೀವು ಈ ಮೇಲಿನ ಆಪಾದನೆಯನ್ನು ಒಪ್ಪಿಕೂಳ್ಳುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೇ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಡಂದ್ದಾಗಿದೆಯೆಂದು ನಾನು ಈ ಮೂಲ ದೃಢಿಕರಿಸುತ್ತೇನೆ.

ಸಹಿ

**ಪ್ರಧಾನ ಪ್ರ.ದ.ನ್ಯಾ ದಂಡಾಧಿಕಾರಿ,**

**ಕುಮಟಾ.**